Regd No B G. 155

48 th Year
ನೇ ವರ್ಷ
★
Sri 'Satyavadi'
— DAILY —
MYSORE 4

Sri

ಸತ್ಯವಾದಿ

ಸಂಸ್ಥಾಪಕರು- ಅಂಮನೆ ಸಿಂಸ್ಯೆದಾರ್ ಎಂ ವಿ ಸೆಬ್ಬರಿಹಾಯರು [2 ನಪ್ಪೆ

6—10—1964

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನಪ್ಪೆ

Protect the Cow

ಗೋಸಂರಕ್ಷಣೆ ಮಾಡಿ

ಚೀಣಾ ಸಮಸ್ಯೆ

ಭಾರತದ ಪ್ರಧಾನಿ ಶ್ರೀ ಲಾಲಬಹಾದ್ದೂರ್ ಶಾಸ್ತ್ರಿಯವರು ಹಾಗೂ ಯು ಗಾಸ್ಲಾವಿಯ ಅಧ್ಯಕ್ಷರಾದ ಮಾ॥ ಟೀ ಟೋರವರು ಚೀಣಾ ಸಮಸ್ಯೆ ಕ್ರಮಕ್ಕೆ ಕೈರೋವಿನಲ್ಲಿ ಮಾತ ಕತೆ ನಡೆಸಿದರು

× ಕಾರ್ಪೊರೇಷನ್ ಚುನಾವಣೆಯಲ್ಲಿ ಕಾಂಗ್ರೆಸಿನ ವಿರುದ್ಧ ಕೋರಾಡಲು ಬೆಂಗಳೂರಿನಲ್ಲಿ ಮಾಜಿ ಮಂತ್ರಿ ಶ್ರೀ ಟಿ ಬ್ರಹ್ಮಣ್ಯಂ ಅಧ್ಯಕ್ಷತೆಯಲ್ಲಿ 21 ಜನರ ಸಮಿತಿ ರಚನೆ ಆಗಿದೆ

ಎಗ್ಜಿಬಿಷನ್ನಿನಲ್ಲಿ ಕಲಾಕೌಶಲ್ಯ
ವಿಭಾಗದಲ್ಲಿ ಬಹುಮಾನಿತರು

1 ವಸ್ತುಪ್ರದರ್ಶನ ಸಮಿತಿಯ ಭಂಗಾರ ಪದಕ-ಶ್ರೀ ಎಂ ಎಸ್' ಜೋಷಿ, ಬೊಂಬಾಯಿ (ವಾಟರ್ ಕಲರ್ ' ಪಹಾಲಾಕಣಿವೆ)

2 ವದರಾಸಿನ ದಕ್ಷಿಣ ಇಂಡಿಯಾ ಫೊಟೋಗ್ರಾಫು ವಕ್ರು ಅಲ್ಬೆಡು ಟ್ರೋಡಸಿ ಅಸೋಸಿಯೇಷನ್ನಿನ ರೂ 101 ಬಹುಮಾನ- ಶ್ರೀ ಎಂ ವಿ ವಿಜಯಕರ್, ಬೊಂಬಾಯಿ (ಫೋಟೋಗಾಫು ಸೆಕ್ಷನ್ನಿನಲ್ಲಿ ಶ್ರೇಷ್ಠತ್ವವುಳ್ಳದ್ದು ' ಪ್ರಾವಿಷನ್ ಆಫ್ ಸ್ಪ್ರಿಂಗ್ '

3 ವಸ್ತುಪ್ರದರ್ಶನಸಮಿತಿಯ ರೂ 100 ಬಹುಮಾನ : ಮೈಸೂರಿನವರ ಅತ್ಯುತ್ತಮ ಪ್ರದರ್ಶಿತ ವಸ್ತು- ಶ್ರೀ ಸಿ. ರಂಗನಾಥಚಂದ್ರ, ಮೈಸೂರು ' ಶಿಲೆಯು ಕೆತ್ತನೆ ವೇಣುಗೋಪಾಲ '

4 ವಸ್ತುಪ್ರದರ್ಶನ ಸಮಿತಿಯ ರೂ 50 ಬಹುಮಾನ. ಅಮೆಚೂರು ಭಾಗದಲ್ಲಿ- ಶ್ರೀ ಕೆ ಎಲ್ ವೆಂಕಟೇಶ್ ಮೈಸೂರು ' ವಾಟರ್ ಕಲರು - ವೇಟಿಂಗ್ '

ರೂ 5000 ಕ್ಕೆ ಹೆಚ್ಚಾಗಿ, ಪ್ರೊಫೆಷನಲ್ ಆರ್ಟ್ಸ್, ಅಮೆಚೂರ್ಸ್, ಕಾಮರ್ಷಿಯಲ್ ಫೊಟೋಗ್ರಫಿ, ಫಿಲ್ಮ್ಸ್ ಆರ್ಟ್ಸ್ ವಿಭಾಗಗಳಲ್ಲಿ ಅತ್ಯುತ್ತಮ ಪ್ರದರ್ಶಿಕೆಗಳಿಗೆ ಕೊಡಲಾಗಿದೆ.

ಬ್ಯಾರಲ್ ನೀರಿಗೆ ಒಂದು ರೂಪಾಯಿ

ರಾಯಚೂರಿನಲ್ಲಿ ಹೋಟಲಿನವರಿಗೆ ಮತ್ತು ಇತರರಿಗೆ ನೀರನ್ನು ಬ್ಯಾರಲ್ ವೊಂದಕ್ಕೆ ಒಂದು ರೂಪಾಯಿನಂತೆ ಮಾರಲಾಗುತ್ತಿದೆ ಇಷ್ಟಿಗೆ ಹತ್ತು ವೈಲಿಗಳ ದೂರವಿರುವ ಯಗ್ಗಸನ್ನಹಳ್ಳಿಯಲ್ಲಿ ನೈಪು ಒಡೆದುಹೋಗಿರುವುದೇ ಈ ತೊಂದರೆಗೆ ಕಾರಣ. ರಿಪೇರಿ ಆಗುವುದಕ್ಕೆ ಇನ್ನೂ ಹದಿನೈದು ದಿನಗಳು ಆಗಬೇಕು.

ಮಹಿಳೆಯ ಪತ್ರ

ಇಟಾರ್ಸಿ-ಅಲಹಾಬಾದು ಪ್ಯಾಸೆಂಜರು ರೈಲಿನ ಫಸ್ಟ್ ಕ್ಲಾಸಿನಲ್ಲಿ 26 ವರ್ಷ ವಯಸ್ಸಿನ ತರುಣಿಯೊಬ್ಬಳ ದೇಹ ಪತ್ತೆ ಆಗಿರುವುದಾಗಿ ಜಬ್ಬಲ್ಪುರ ವರದಿ ಆಕೆಯ ಮೈಮೇಲೆ ಚೂರಿಯಿಂದ ತಿವಿದ ಗಾಯಗಳಿವೆ

ಮುಷ್ಕರ

ಇಂದೂರು ವಿಶ್ವವಿದ್ಯಾನಿಲಯಕ್ಕೆ ಅಫಿಲಿಯೇಟು ಆಗಬೇಕೆಂಬ ಆಯುರ್ವೇದ ಕಾಲೇಜಿನ ವಿದ್ಯಾರ್ಥಿಗಳ ಬೇಡಿಕೆಗೆ ಮನ್ನಿಸಿ ಇಂದೂರಿನ 9 ಕಾಲೇಜುಗಳ 8 ಸಾವಿರ ವಿದ್ಯಾರ್ಥಿಗಳು ಮುಷ್ಕರ ಹಿಸಿದ್ದಾರೆ.

ಯೋಜನಾ ಸಮಿತಿಯ ಉಪಾಧ್ಯಕ್ಷರಾದ ಶ್ರೀ ಅಶೋಕ ಮೆಹತಾರವರು ಲೂಧಿಯಾನಾದಲ್ಲಿ ಹೇಳಿಕೆಯಿತ್ತು, ಭಾರತದ ಆಹಾರ ಉತ್ಪಾದನೆ ಎಂಟೂವರೆ ಟನ್ನುಗಳಿಂದ ಸಾವಿಂದ ಇನ್ನೂರು ಟನ್ನುಗಳಷ್ಟು ಏಂಬೇಕೆಂದು ತಿಳಿಸಿದರು.

ನಾಳೆಯ ಪಂಚಾಂಗ

ದೈವಜ್ಞಶಿಖಾಮಣಿ
ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣ ಜೋಯಿಸರವರಿಂದ

7 ದ್ವಿತೀಯ ಚಿತ್ತ

ವೈಭವದ ದಸರಾ ಆರಂಭ

ಪ್ರಪಂಚ ಪ್ರಸಿದ್ಧ ವೈಭವಯುತ ದಸರಾ ಮಹೋತ್ಸವದ ಆರಂಭ ಈ ದಿನ ಈ ಮಹೋತ್ಸವಕ್ಕೆ ಸ್ಥಳ ಪರ ಸ್ಥಳಗಳಿಂದ ಜನರು ಆಗಮಿಸಿತ್ತಿರುವರು.

ದರ್ಬಾರು ಹಾಲಿಗೆ ಶ್ರೀಮನ್ಮಹಾರಾಜರವರು 10-45 ಕ್ಕೆ ಬಿಜಯಮಾಡಿಸಿ 11-20 ಗಂಟೆಗೆ ಸಿಂಹಾಸನಾರೋಹಣ

21 ಕುಶಾಲ ತೋಪುಗಳು ಹಾರುವುವು ಈ ಮಾಹೆ 15 ರವರೆಗೆ ಪ್ರತಿ ದಿನ ಸಂಜೆ 7 ಗಂಟೆಗೆ ರಾಜ್ಯ ಸಭೆ 15 ನೇ ತಾ॥ 6-12 ಕ್ಕೆ ಆಯುಧ ಪೂಜೆ, 16 ನೇ ತಾ॥ 4-6 ಕ್ಕೆ ವಿಜಯದಶಮಿ ಬೂಸವಾರಿ

★

ಬಹುಮಾನ ವಿನಿಯೋಗ

ಮೈಸೂರು ಪುರಸಭಾಧ್ಯಕ್ಷರಾದ ಶ್ರೀ ಎಂ ವೆಂಕಟಲಿಂಗಯ್ಯನವರು ಮಹಾರಾಜ ಕಾಲೇಜು ಗ್ರೌಂಡ್ಸಿನಲ್ಲಿ ಜಿಲ್ಲಾ ಮಟ್ಟದ ದಸರಾ ಕ್ರೀಡೆಗಳನ್ನು ಆರಂಭಿಸಿದರು ಜಿಲ್ಲಾಧಿಕಾರಿಯವರಾದ ಶ್ರೀ ಎಂ ವಾಸುದೇವಂರಾಯರು ನಿನ್ನೆ ಬಹುಮಾನ ವಿನಿಯೋಗ ಮಾಡಿದರು

ಉದ್ಘಾಟನೆ

ಮೈಸೂರಿನ ರಾಜ್ಯಪಾಲರಾದ ಶ್ರೀ ಎಸ್ ಎಂ ನಾಗೇಶರವರಿಂದ ಈ ದಿನ ಬೆಳಿಗ್ಗೆ ದಸರಾ ವಸ್ತುಪ್ರದರ್ಶನ ಆರಂಭ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆ

ವಾರ್ತಾ ವಿಶೇಷಗಳು

ಒಂದೂವರೆ ವರ್ಷದಲ್ಲಿ ಭಾರತ ಪರಮಾಣು ಸ್ಫೋಟ ಮಾಡುವುದಾಗಿ ಭಾರತ ಅಣು ಶಕ್ತಿ ಸಮಿತಿಯ ಪ್ರಧಾನಾಧಿಕಾರಿ ಡಾ॥ ಭಾಭಾ ಲಂಡನ್ನಿನಲ್ಲಿ ತಿಳಿಸಿದರು

ಭಾರತಕ್ಕೋಸ್ಕರ ಪಶ್ಚಿಮ ಜರ್ಮನಿ ಸಂಸ್ಥೆಯೊಂದು 5 ಹಡಗುಗಳ ನಿರ್ಮಾಣ ಮಾಡುವುದು

ಮಂತ್ರಿಗಳು ಹೇಗಿರಬೇಕೆಂಬುದರಿಂದ ಇನ್ನೂ ನಡವಳಿಕೆ ಸಿದ್ಧವಾಗಿಲ್ಲವೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು

ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳದ ಶಾಲೆಯೊಂದರ ಚಾವಣಿ ಕುಸಿದು ಅದರಲ್ಲಿ ಆಶ್ರಯ ಪಡೆದಿದ್ದ 10 ಮಂದಿ ಮಂದಿ ಮರಣಹೊಂದಿದರೆಂದು ಭಾರವು ಬಂದಿದೆ ಎಂದು ಷೋಲಾಪುರ ವರದಿಯೊಂದು ತಿಳಿಸುತ್ತದೆ

ಪಾಕಿಸ್ತಾನದಿಂದ 3400 ಟನ್ನುಗಳ ಅಕ್ಕಿ ಕೊಚ್ಚಿಯ ಬಂದರಿಗೆ ಬಂದಿದೆ

ಕಟ್ಟಡದ ತೆರಿಗೆಯ ಬೇಲಿ ಶ್ರೇಷ್ಠ ನ್ಯಾಯಾಲಯದ ತೀರ್ಪಿನ ವಿರುದ್ಧವಾಗಿ ಮೈಸೂರು ಸರ್ಕಾರ ಸುಪ್ರೀಂ ಕೋರ್ಟಿಗೆ ಅಪೀಲು ಹೋಗಬೇಕೆಂಬ ವಂದಿಯನ್ನು ಕುರಿತು ರಾಜ್ಯ ಕಟ್ಟಡ ಮಾಲೀಕರ ಸಂಘವು ಪ್ರತಿಭಟಿಸಿದೆ

ಗಾಂಧೀಜಿಯವರ ಗುರುತನ್ನು ನಾಣ್ಯಗಳ ಮೇಲೆ ಮುದ್ರಿಸಿದರೆ ತಾವು ಚಳವಳಿ ಆರಂಭಿಸುವುದಾಗಿ ಗಾಂಧೀಜಿಯವರ ಮೊಮ್ಮಗ ಶ್ರೀ ರಾಜಮೋಹನ ಗಾಂಧಿ ಬೊಂಬಾಯಿನಲ್ಲಿ ತಿಳಿಸಿದರು

ಕೈಗಾರಿಕೆ ಮೇಲೆ ನಿಯಂತ್ರಣವಿರಕೂಡದೆಂದು ಬೊಂಬಾಯಿನಲ್ಲಿ ರಾಜಾಜಿಯವರು ಸೂಚಿಸಿದರು

ದಿವಂಗತ ಶ್ರೀ ಟಿ. ಪುರಿಯಪ್ಪನವರ ನಿಧನಕ್ಕೆ ಸಂಬಂಧವಾಗಿ ನಿನ್ನೆ ಪುರಸಭಾಧ್ಯಕ್ಷ ಶ್ರೀ ಎಂ. ವೆಂಕಟಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನಿನ್ನೆ ಸಂಜೆ ಒಹಿಂಗ ಸಭೆ ನಡೆಯಿತು.

ಶ್ರೀಚಕ್ರ ಲಕ್ಷಾರ್ಚನೆ

ಮೈಸೂರು ಹಳ್ಳದಕೇರಿಯಲ್ಲಿರುವ ಜ್ಯೋತಿರ್ವಿಂದಿಂಗಲ್ಲಿ ಶ್ರೀ ಸಿದ್ಧಾಂತಿ ಂ ಎಸ್ ಜಾಂದ ಶೇಷು-ಜೋಯಿಸರು ಅಶ್ವಯುಜ ಶುಕ್ಲಪಕ್ಷ ಪ್ರತಿಪ ಮಂಗಳ ವಾರ ತಾ|| 6 ರಿಂದ 16 ರವರೆಗೆ ಶ್ರೀಚಕ್ರ ಲಕ್ಷಾರ್ಚನೆ ಏರ್ಪಡಿಸಿರುವರು

ಶ್ರೀ ಮರಿಯಪ್ಪನವರ ನಿಧನ ಬಗ್ಗೆ ಸಂತಾಪ

ಮೈಸೂರು ಪೌ ಸಭೆಯ ಆಶ್ರಯದಲ್ಲಿ ನಿನ್ನೆ ಸಂಜೆ ಟೌನ್ ಹಾಲಿನಲ್ಲಿ ರ್ಪಡಿಸಲಾಗಿದ್ದ ಸಾರ್ವಜನಿಕ ಸಭೆಯಲ್ಲಿ, ಮೈಸೂರಿನ ಪ್ರಮುಖ ಪ್ರಜೆಯಾ ದ್ದ ಮತ್ತು ಪೌರಸಭಾ ಸದಸ್ಯರೂ ಉಪಾಧ್ಯಕ್ಷರೂ ಮೇಲಾಗಿ ಮೈಸೂರು ರಾಜ್ಯದ ಮಾಜಿ ಸಚಿವರಾಗಿದ್ದ ಶ್ರೀ ಟಿ ಮರಿಯಪ್ಪನವರು ತಾ|| 2 ರಂದು ನಿಧನ ದ ಬಗ್ಗೆ ಅವರ ಗುಣಗಾನ ಮಾಡಲ್ಪಟ್ಟು ಸಂತಾಪ ಸೂಚಿಸಲಾಯಿತು.

ದಸರಾ ಮನ ರಂಜನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ

ತಾ || 6 ರಂದು ಟೌನ್‌ಹಾಲಿನಲ್ಲಿ 8.30 ರಿಂದ 12 ಮತ್ತು 3 ರಿಂದ 7-30 ರವರಿಗೂ, ಎಗ್ಜಿಬಿಷನ್ನಿನಲ್ಲಿ 5.30 ರಿಂದ 9-30 ರವರೆಗೂ, ನಾಗಸ್ವರ, ಸಂಗೀತ, ನಾಟಕ ಏರ್ಪಡಿಸಲಾಗಿದೆ

ತಾ || 7 ರಂದು ಟೌನ್‌ಹಾಲಿನಲ್ಲಿ 8 ರಿಂದ 12 ಮತ್ತು 3 ರಿಂದ 7 ರವ ರೆಗೂ, ಎಗ್ಜಿಬಿಷನ್ನಿನಲ್ಲಿ 5-30 ರಿಂದ 9 ರವರೆಗೂ, ಕಾವ್ಯವಾಚನ, ಸಂಗೀತ ಭಜನೆ, ನಾಗಸ್ವರ, ನೃತ್ಯ ಏರ್ಪಡಿಸಲಾಗಿದೆ.

ಶಾಸ್ತ್ರಗಳನ್ನು ಟೀಕಿಸುವುದು ಸರಿಯೇ ?

ಈ ಕಾಲದಲ್ಲಿ ಶಾಸ್ತ್ರಗಳನ್ನು ಟೀಕಿಸುವುದರಲ್ಲಿ ಅನೇಕರು ಹಿಂದು ಮುಂದು ನೋಡುವುದಿಲ್ಲ ; ಶಾಸ್ತ್ರಗಳನ್ನು ಟೀಕಿಸುವುದು ಮಹಾಪಾಪವೆಂದು ಏನೂ ಗಮನಕ್ಕೆ ಬರುವುದೇ ಇಲ್ಲ : ಯಾವ ವಿಚಾರದಲ್ಲಿ ಅನುಮಾನ, ಸಂಶಯ, ಸಂದಿಗ್ಧಗಳಿರುತ್ತವೆಯೋ ಆ ವಿಚಾರದಲ್ಲಿ ಮಾತ್ರ ಚರ್ಚೆ ಹಾಗೂ ಟೀಕೆಗಳನ್ನು ಮಾಡಬಹುದು : ಶಾಸ್ತ್ರಗಳನ್ನು ಹೀಯಾಳಿಸುವವರು, ಶತ, ಶತಮಾನ ಗಳಿಂದಲೂ ಅವರ ತಂದೆ ತಾತತಂದಿರನ್ನು ತೃಪ್ತಿಪಡಿಸಿದ ಶಾಸ್ತ್ರಗಳು ತಕ್ಷಣ ದಲ್ಲೇ ಇವರಿಗೆ ತಪ್ಪು ಹಾಗೂ ಬುದ್ಧಿಹೀನತೆಯಿಂದ ಕೂಡಿದೆಯೆಂದು ಅನ್ನಿಸಿದ್ದೇಕೆ ? ಅವರ ಪೂರ್ವಿಕರು ಜಾತೀಯತೆ, ಅಸ್ಪೃಶ್ಯತೆ, ಕರ್ಮ- ಮಾಯ ಪುನರ್ಜನ್ಮ ಮುಂತಾದ ಪಾಪಗಳನ್ನು ಮಾಡಿದರೆಂದೇಕೆ ಭಾವಿಸಬೇಕು ? ಪುಣ್ಯದಲ್ಲಿ ಯೂ, ಬುದ್ಧಿವಂತಿಕೆಯಲ್ಲಿಯೂ ತನ್ನ ಪೂರ್ವಿಕರಿಗಿಂತ ತಾವು ಹೆಚ್ಚೆಂದು ತಿಳಿಯಲೇಕೆ ? ಇವರುಗಳು, ಶಾಸ್ತ್ರಗಳು ತಮ್ಮ ಇಚ್ಛಾನುಸಾರವಾಗಿ ನಡೆಯುವುದಿಲ್ಲವೆಂದ, ತಾವು ಅವತಾರ ಪುರುಷರೆಂದು ತಿಳಿಯಲು ಕಾರಣವೇನು ?

ಏಕೆಂದರೆ ದಿನೇದಿನೇ ಬೆಳೆಯುತ್ತಿರುವ ಅನೈತಿಕತೆ, ನೀಚತೆ ಮುಂತಾದು ವುಗಳಿಂದ ಶಾಸ್ತ್ರಗಳಲ್ಲಿ ಶ್ರದ್ಧೆ ಕಮ್ಮಿಯಾಗಿ, ಯಾವ ಶಾಸ್ತ್ರಗಳು ರಕ್ಷಣೆ ಮಾಡುತ್ತಿತ್ತೋ ಅಂಥಹ ಶಾಸ್ತ್ರಗಳೆಂಬ ಕವಚವು ಇಂದು ಹೊರತಾದ ಹೊರೆಯಾಗಿತ್ತಿದೆ : ಪಂಕೀಯಂ ಅನುಕರಣೆಗೆ ಸೋತು ಮನಸ್ಸಿಗೆ ಸರಿಯಾದುದು ತಪ್ಪಾಗಿಯೂ, ತಪ್ಪಾದುದು ಸರಿಯಾಗಿಯೂ ಕಾಣುತ್ತಿದೆ.

ಶಾಸ್ತ್ರಗಳನ್ನು ಟೀಕಿಸಲು ಎರಡು ಕಾರಣಗಳಿವೆ : ಒಂದು ವಿಜ್ಞಾನ ವೇ ಸರಿಯೆಂದು ನಂಬಿ, ತಾನೇ ಮಹಾಬುದ್ಧಿವಂತನೆಂದು ತಿಳಿದು, ತನಗೆ ತಿಳಿಯು ದೇ ಇರುವ, ಇಂದ್ರಿಯಗಳಿಗೆ ಎಂದಿಗೂ ಗೋಚರವಾಗದೇ ಇರುವ, ವಿಷಯ ವನ್ನು ತಿಳಿಯಲು ಹೋಗಿ, ಸಾಧ್ಯವಾಗದೇ ಅದಕ್ಕಾಗಿ ನಾಚಿಕೆಯೂ ಇಲ್ಲದೇ ಶಾಸ್ತ್ರಗಳನ್ನು ಬಿಡುವುದು ; ವಿಶ್ವಾಸವೆಂದರೆ ತದ್ದ ಅನೈತಿಕತೆ ಮತ್ತು ಅನಾ ಚಾರವನ್ನು ಬಿಡಲಾರದೇ ಹೇಡಿಯಂತೆ ಶಾಸ್ತ್ರಗಳನ್ನೇ ಟೀಕಿಸುವುದು

ಇದೇ ಶಾಸ್ತ್ರಗಳನ್ನು ಟೀಕಿಸುವವರು, ಗಣಿತ ಮತ್ತು ಆಧುನಿಕ ವಿಜ್ಞಾ ನವನ್ನು ಕಲಿಯುವಾಗ ಯಾವ ಟೀಕೆಯನ್ನೂ ಮಾಡುವುದಿಲ್ಲ ; ತಮಗಿರುವ ಅಲ್ಪ ಜ್ಞಾನದ ಮಿತಿಯನ್ನು ತಿಳಿಯದೇ ತಾವೇ ಸರ್ವಜ್ಞ ಸುಧಾಕರೆಂದು ಕರೆದು ಕೊಳ್ಳುತ್ತಾರೆ ; ' ಒಂದು ಸಿಂಹವು ಒಂದು ಆನೆಯನ್ನು ಕೊಲ್ಲಬಲ್ಲುದು, ಆದರೆ ಜಿಂಕೆಯಿಂದ ಸಾಧ್ಯವಿಲ್ಲ : ಮತ್ತು ಭಯಂಕರವಾದ ನಾಯಿಗಳಿಂದ ಮಾತ್ರವೇ ನಾಯಿ ಕೊಲ್ಲಲ್ಪಡುತ್ತದೆ, ಆದರೆ ಆಡಿನಿಂದಲ್ಲ '. [ಮುಂದುವರಿಯುವುದು

Interpretationo sf Shastras ಎಂಬ ಗ್ರಂಥದಿಂದ ಸಂಗ್ರಹಿಸಲಾಗಿದೆ

ಆ. ಸ. ಅಯ್ಯಂಗಾರ್, ಹೊಂಗನೂರು.

ಪ್ಯಾಡ್‌ಲಾಂಡ್ಸ್ ತೇಜಸ್ವಿ 4 ನೇ ವಾರ

.... ಎ. ವಿ. ಎಂ. ರವರ ಅತ್ಯಮೋಘ ಹಿಂದಿ ಚಿತ್ರ ....

ಪೂಜಾ ಕೆ ಫೂಲ್

ತಾರಾಗಣ- ಅಶೋಕಕುಮಾರ್, ವೈಜಯಂತಿಮಾಲಾ, ನಿಮ್ಮಿ, ಧರ್ಮೇಂದರ್, ಪ್ರಾಣ್

[ದಿನವಹಿ 3 ಪ್ರದರ್ಶನಗಳು]

ಆಪೆರಾ ಜನಪ್ರಿಯ 3 ನೇ ವಾರ

ಅತ್ಯಮೋಘ ಕನ್ನಡ ಚಿತ್ರ [ದಿನ 3 ಆಟಗಳು]

ಪೋಸ್ಟ್ ಮಾಸ್ಟರ್

ಪಾತ್ರಧಾರಿಗಳು- ವಂದನಾ, ಪಾಪಮ್ಮ, ಈಶ್ವರಪ್ಪ, ಶಿವರಾಜ್, ಶಿವಶಂಕರ್, ಬಾಲಕೃಷ್ಣ

ರಣಜಿತ್‌ನಲ್ಲಿ 2-10-64 ರಿಂದ

ಆನೋಖಾ ಪ್ರಾರಂಭ

- ಮನರಂಜಕ, ಬೋಧಕ್ರದ, ಆಕರ್ಷಣೀಯ ಕೌಟುಂಬಿಕ ಕನ್ನಡ ಚಿತ್ರ -

ಸಕಲರೂ ನೋಡಿ ಆನಂದಿಸಬೇಕಾದ ಅತ್ಯಮೋಘ ಕಲಾಕೃತಿ

ಮುರಿಯದ ಮನೆ [ಕನ್ನಡ]

ರಾಜಕುಮಾರ್, ಉದಯಕುಮಾರ್, ಅಶ್ವತ್ಥ್, ಬಾಲಕೃಷ್ಣ, ನರಸಿಂಹರಾಜು

ಪಂಡರೀಬಾಯಿ, ಜಯಂತಿ ಮುಂತಾದವರು ಪಾತ್ರಧಾರಿಗಳು

ನಿರ್ದೇಶನ : ವೈ. ಆರ್. ಸ್ವಾಮಿ, ಎಂ. ಎ.

4 ಪ್ರಾಂಗಳು ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಿದೆ

ಪ್ರತಿ ದಿನ 3 ಆಟಗಳು — ಕರ್ನಾಟಕ ಫಿಲ್ಮ್ಸ್ ಹಂಚಿಕೆ

SHAKTI
SUDHA

Superb Tonic

Help The ' Gorakshana'

" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ

ವಾರ್ಷಿಕ ಚಂದಾ 50 ನ ಪೈ

' ಗೋರಕ್ಷಣ ' ಕ್ಕೆ ಸಹಾಯದ್ರವ್ಯವನ್ನೂ ಲೇಖನಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

Edited, Printed & Published by the Proprietor Dharma Prachara Nirata M. S. Krishna Rao at the Satyavadi Press, Chamarajapuram, Mysore 4